


ಗುಂಡ: ಸಾರ್ ಈ ಫೋಟೋಗಳು ಯಾರದ್ದು?
ಪೊಲೀಸ್: ತಪ್ಪಿಸಿಕೊಂಡು ಓಡಿ ಹೋಗಿರುವ ಕಳ್ಳರದ್ದು, ಅವರನ್ನು ಪತ್ತೆ ಮಾಡಿ ಸೆರೆಹಿಡಿಯಬೇಕಾಗಿದೆ.
ಗುಂಡ: ಅಲ್ಲಾ ಸಾರ್! ಅವರ ಫೋಟೋಗಳನ್ನು ತೆಗೆಯುವಾಗ ಸೆರೆ ಹಿಡಿಯಬಹುದಿತ್ತಲ್ಲ!

★★★

ಗುಮಾಸ್ತ: ಸಾರ್ ಒಂದು ವಿಷಯ.
ಅಧಿಕಾರಿ: ಏನು?
ಗುಮಾಸ್ತ: ಏನಿಲ್ಲ ಸರ್! ನನಗೆ ವಿಪರೀತ ಆಯಾಸವಾಗಿದೆ. ಅದಕ್ಕೆ ಎರಡು ದಿನ ರಜೆ ಬೇಕು.
ಅಧಿಕಾರಿ: ಯಾಕೆ ನಾನು ಒಂದು ತಿಂಗಳು ರಜೆ ಹೋಗಿದ್ದೆನಲ್ಲ, ಅದು ನಿನಗೆ ಸಾಕಾಗಲಿಲ್ಲವಾ?

★★★

ತಂದೆ: ಲೋ ಮಗನೆ ಏನೋ ಇದು? ಗಂಟೆ ಹತ್ತಾಗಿದೆ. ಈಗ ಏಳ್ತಿದೀಯಾ?
ಮಗ: ಅಪ್ಪಾ ನನಗೊಂದು ಬಹಳ ದೊಡ್ಡದಾದ ಕನಸು ಬಿದ್ದಿತ್ತಪ್ಪಾ!

★★★

ವರನ ತಂದೆ: ನಿಮ್ಮ ಹುಡುಗಿ ನಮ್ಮೆಲ್ಲರಿಗೂ ಹಿಡಿಸಿದ್ದಾಳೆ. ಮದುವೇಲಿ ಹುಡುಗೀಗೆ ಏನೇನು ಹಾಕ್ತೀರಾ?
ಹುಡುಗಿಯ ತಂದೆ: ತಲೆಗೂದಲಿಗೆ ಡೈ, ತುಟಿಗೆ ಲಿಪ್ ಸ್ಟಿಕ್, ಕಣ್ಣಿಗೆ ಕಪ್ಪು, ಕೈಗೆ ಗೋರಂಟಿ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಬ್ರಹ್ಮಚಾರಿ ಸ್ನೇಹಿತ ತನ್ನ ಪ್ಯಾಂಟ್ ಷರ್ಟ್ ತಾನೇ ಒಗೆಯುತ್ತಿದ್ದಾಗ ವಿವಾಹಿತ ಗುಂಡ, 'ಮದುವೆ ಮಾಡಿಕೊಳ್ಳಿ' ಎಂದು ಸಲಹೆಯಿತ್ತ. ಅನಂತರ ಆ ಸ್ನೇಹಿತ ಗುಂಡನ ಮನೆಗೆ ಆಗಮಿಸಿದಾಗ ಆತ ಸ್ವಯಂ ಬಟ್ಟೆ ಒಗೆಯುತ್ತಿರುವುದನ್ನು ನೋಡಿ, 'ನೀನು ಈಗಲೂ ಪ್ಯಾಂಟ್‌ಷರ್ಟ್ ಒಗೆಯುತ್ತಿದ್ದೀಯಾ?' ಎಂದು ವಿಚಾರಿಸಿದ.
ಗುಂಡ: ಸರಿಯಾಗಿ ನೋಡು, ಈ ಸೀರೆ ಬ್ಲೌಸ್ ನಿನಗೆ ಪ್ಯಾಂಟ್ ಷರ್ಟ್ ತರಹ ಕಾಣಿಸುತ್ತಿದೆಯೇ?

★★★

ಪೊಲೀಸ್: ನಿನ್ನ ಮನೆಯಲ್ಲಿ ವಿಸ್ಫೋಟಕ ಪದಾರ್ಥವಿದೆಯೆಂಬ ಸುದ್ದಿ ಸಿಕ್ಕಿದೆ.
ಗುಂಡ: ಸುದ್ದಿಯೇನೋ ಸರಿಯಾಗಿಯೇ ಇದೆ ಸಾರ್. ಆದರೆ ಸದ್ಯಕ್ಕೆ ಆಕೆ ತವರು ಮನೆಗೆ ಹೋಗಿದ್ದಾಳೆ!

★★★



ಕೆಜಿ ಸ್ಕೂಲಿಗೆ ಹೋಗುತ್ತಿರುವ ಪುಟ್ಟನಲ್ಲಿ ಗುಂಡ ಕೇಳಿದ, 'ಯಾವ ಸ್ಕೂಲಿಗೆ ಹೋಗುತ್ತಿರುವೆ ಮಗೂ...?'
ಪುಟ್ಟ: (ಒಲ್ಲದ ಮನಸ್ಸಿನಿಂದ) ನಾನು ಹೋಗುತ್ತಿಲ್ಲ, ನನ್ನನ್ನು ಕಳುಹಿಸುತ್ತಿದ್ದಾರೆ!

★★★

ಹುಡುಗಿ: ಡಾಕ್ಟರ್, ನಾನು ಹೊರಗೆ ಬಿಸಿಲಲ್ಲಿ ಹೋದಾಗಲೆಲ್ಲಾ ಮುಖದಲ್ಲಿ ಉರಿ ಬರುತ್ತದೆ.
ಡಾಕ್ಟರ್: ನಿನ್ನ ಮುಖದ ಎಕ್ಸ್ ರೇ ತೆಗೆಯಬೇಕಾಗುತ್ತದೆ.
ಹುಡುಗಿ: ಹಾಗೆಂದರೇನು ಡಾಕ್ಟರ್?
ಡಾಕ್ಟರ್: ಎಕ್ಸ್ ರೇ ಮೂಲಕ ನಿಮ್ಮ ಮುಖದ ಫೋಟೋ ತೆಗೆಯಲಾಗುತ್ತದೆ.
ಹುಡುಗಿ: ಒಂದೈದು ನಿಮಿಷ ತಾಳಿ ಡಾಕ್ಟರ್, ಮೇಕಪ್ ಮಾಡಿಕೊಂಡು ಬರುತ್ತೇನೆ!

**(ಸಂಗ್ರಹ) ರಮಣ್ ಶೆಟ್ಟಿ ರಂಜಾಳ್, ಮುಂಬೈ**

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460